**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ: 569/2024**

**ಚಾ.ಸಾಃ 2, ಪ್ರಾ.ಸಾಃ 01**

| | |
|---|---|
| ಸಾಕ್ಷಿದಾರನ ಹೆಸರು | ಗಜಾನನ ನಾಯ್ಕ |
| ತಂದೆಯ ಹೆಸರು | ದೇವಿದಾಸ ನಾಯ್ಕ |
| ವಯಸ್ಸು | 43ವರ್ಷಗಳು |
| ಉದ್ಯೋಗ | ಚಾಲಕ |
| ವಾಸ್ತವ್ಯ | ಕೆರೆಕೋಣ, ಅರೆಅಂಗಡಿ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 24-04-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಆರೋಪಿಯನ್ನು ನಾನು ನೋಡಿರುವುದಿಲ್ಲ. ಆತ ಯಾರೋ ನನಗೆ ಗೊತ್ತಿಲ್ಲ.

ಈಗ್ಗೆ 2 ವರ್ಷಗಳ ಹಿಂದೆ ಚಂದಾವರ ಬ್ರಿಡ್ಜ ಹತ್ತಿರ ನಾನು ಲಾರಿಯಲ್ಲಿ ಕಲ್ಲು ತುಂಬಿಕೊಂಡು ಹೋಗುತ್ತಿದ್ದಾಗ ಪೋಲೀಸರು ನನ್ನನ್ನು ತಡೆದು ನಿಲ್ಲಿಸಿ 2 ದಾಖಲೆಗಳಿಗೆ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಸದರಿ ದಾಖಲೆಗಳನ್ನು ಈಗ ನೋಡುತ್ತಿದ್ದು, ಒಂದು ಸ್ಥಳ ಪಂಚನಾಮೆ ಮತ್ತು ಇನ್ನೊಂದು ಹ್ಯಾಶಿಂಗ್ ವರದಿಯಾಗಿದ್ದು ಅವುಗಳನ್ನು ನಿಪಿ-1 ಮತ್ತು 2 ಎಂದು, ಸಾಕ್ಷಿ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ಅವುಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 12-08-2024ರಂದು ಮಧ್ಯಾಹ್ನ 01-20ರ ಸಮಯದಲ್ಲಿ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿರುವ ಆರೋಪಿಯ ವಾಸದ ಮನೆಯ ಹತ್ತಿರ ಆರೋಪಿಯು ಅಕ್ರಮ ಮದ್ಯವನ್ನು 2 ಪ್ಲಾಸ್ಟಿಕ್ ಚೀಲಗಳಲ್ಲಿ ಮಾರಾಟ ಮಾಡಲು ಅಕ್ರಮವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿದ್ದು ಪೋಲಿಸರು ದಾಳಿ ಮಾಡಲು ನನ್ನನ್ನು ಪಂಚರಾಗಿ ಬರಬೇಕೆಂದು ಕರೆದಿದ್ದು ಅದರಂತೆ ಮಧ್ಯಾಹ್ನ 01-30ರ ಸಮಯದಲ್ಲಿ ಆರೋಪಿಯ ಮನೆಯ ಮೇಲೆ ದಾಳಿ ಮಾಡಿ ಆತ ತನ್ನ ಅಡಿಗೆ ಮನೆಯಲ್ಲಿ ಅಕ್ರಮವಾಗಿ ದಾಸ್ತಾನು ಮಾಡಿದ್ದ ವಿವಿಧ ನಮೂನೆಯ ಸುಮಾರು ರೂ.13,263-00 ಬೆಲೆ ಬಾಳುವ ಮದ್ಯವನ್ನು ದಾಸ್ತಾನು ಮಾಡಿದ್ದು ಪೋಲೀಸರು ಅವುಗಳನ್ನು ನನ್ನ ಮತ್ತು ಚಾಸಾ-3ರ ಸಮಕ್ಷಮ ಅಮಾನತ್ತುಪಡಿಸಿಕೊಂಡು ನಿಪಿ-1ರಂತೆ ಪಂಚನಾಮೆ ತಯಾರಿಸಿ

ಫೋಟೋ ತೆಗೆಸಿ, ನಿಪಿ–2ರ ಹ್ಯಾಶಿಂಗ್ ವರದಿಗೆ ಸಹಿ ತೆಗೆದಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡಿರುವ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ನನ್ನ ಸಮಕ್ಷಮದಲ್ಲಿ ಅವುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–2ರ ವಿಚಾರಗಳು ಗೊತ್ತಿದ್ದರೂ ಆರೋಪಿಯ ಮನೆಯಲ್ಲಿ ಮದ್ಯವನ್ನು ಅಮಾನತ್ತುಪಡಿಸಿಕೊಂಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**